# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | :679 |
| ಮಾನ್ಯ ಸದಸ್ಯರ ಹೆಸರು | :ಶ್ರೀ ಐವನ್ ಡಿ'ಸೋಜಾ |
| ಉತ್ತರಿಸುವ ದಿನಾಂಕ | :22.07.2024 |
| ಉತ್ತರಿಸುವ ಸಚಿವರು | :ಉನ್ನತ ಶಿಕ್ಷಣ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಒಂದನೇಯ ತರಗತಿಯಿಂದ ಹೈಯರ್ ಸೆಕೆಂಡಿವರೆಗೆ ಕನ್ನಡ ಮಾಧ್ಯಮದಲ್ಲಿ ಓದಿದ ಕಾಸರಕೋಡಿನ ವಿದ್ಯಾರ್ಥಿಗಳಿಗೆ ಕರ್ನಾಟಕದ ಉನ್ನತ ಶಿಕ್ಷಣ (ಸಿಇಟಿ)ದಲ್ಲಿ ಮಾತೃ ಭಾಷೆ ಕೊಂಕಣಿ ಭಾಷೆ ಎಂಬ ಕಾರಣಕ್ಕಾಗಿ ಪ್ರವೇಶ ನಿರಾಕರಿಸಲು ನಿಜವೇ;(ವಿವರ ನೀಡುವುದು) | ಸಿಇಟಿ-2006ರ ಪ್ರವೇಶ ನಿಯಮ (2) (ಜೆ) ಗಡಿನಾಡು ಕನ್ನಡಿಗ - 'Gadinadu Kannadiga' means, a candidate whose mother tongue is Kannada or Tulu or Kodava or Beary and who resides in Kannada speaking areas of South Sholapur or Akkalakot or Jath or Gadhinglaj Taluks of Maharashtra State or Kasargod (or Hosadurga) Taluk of Kerala State ಎಂದು ಉಲ್ಲೇಖವಿರುತ್ತದೆ.<br><br>ಮಾತೃ ಭಾಷೆ ಕೊಂಕಣಿಯಾಗಿದ್ದಲ್ಲಿ, ಅಭ್ಯರ್ಥಿಯನ್ನು ಗಡಿನಾಡು ಕನ್ನಡಿಗ ಅಭ್ಯರ್ಥಿ ಎಂದು ಪರಿಗಣಿಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ.<br><br>ಮಾತೃ ಭಾಷೆ ಕೊಂಕಣಿಯಾಗಿದ್ದಲ್ಲಿ, ಅಂತಹ ಅಭ್ಯರ್ಥಿಗಳಿಗೆ ಕರ್ನಾಟಕ ಕೋಟಾದ ಸರ್ಕಾರಿ ಸೀಟು ಹಂಚಿಕೆಗೆ ಪರಿಗಣಿಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ.<br><br>ಆದರೆ, ಒಂದರಿಂದ ಹತ್ತನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ಹೊರರಾಜ್ಯಗಳಲ್ಲಿ ವ್ಯಾಸಂಗ ಮಾಡಿರುವ ಅಭ್ಯರ್ಥಿಗಳು ಸಹ ನಿಯಮಾನುಸಾರ ಸರ್ಕಾರಿ ಸೀಟುಗಳನ್ನು ಪಡೆಯಲು ಅವಕಾಶವಿರುತ್ತದೆ. ಸಿಇಟಿ 2006ರ ನಿಯಮ 5 (xiv) ಈ ರೀತಿ ಇದೆ.<br><br>"candidate who have studied in Kannada Medium from $1^{st}$ to $10^{th}$ standard in places outside the state of Karnataka and passed the qualifying examination from any Government or Government recognized educational Institution." |
| ಆ | ಗಡಿನಾಡಿನಲ್ಲಿ ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ಪಡೆದ ವಿದ್ಯಾರ್ಥಿಗಳಿಗೆ ಕೊಂಕಣಿ ಭಾಷೆ "ಮಾತೃ ಭಾಷೆ" ಎಂಬ ಕಾರಣಕ್ಕಾಗಿ ನಿರಾಕರಿಸುವುದು ಸರಿಯೇ; ಈ ಬಗ್ಗೆ ಸರ್ಕಾರದ ಚಿಂತನೆಯೇನು; | |
| ಇ | ಅವಕಾಶ ವಂಚಿತರಾದ ವಿದ್ಯಾರ್ಥಿಗಳಿಗೆ ನ್ಯಾಯ ಒದಗಿಸಲು ಮತ್ತು ಇಂತಹ ಘಟನೆಗಳು ಮರುಕಳಿಸದಂತೆ ಸರ್ಕಾರ ಕೈಗೊಂಡ ಕ್ರಮಗಳೇನು; | |
| ಈ | KCET Eligibility Criteria – 2024 ನಲ್ಲಿ ಮಾತೃ ಭಾಷೆ ಕನ್ನಡ, ತುಳು ಮತ್ತು ಕೊಡವ ಎಂದು ಮಾತ್ರ ನಮೂದಿಸಿದ್ದು, ಕ್ರೈಸ್ತರು ಕೊಂಕಣಿ ಭಾಷೆ ಮಾಡನಾಡುವವರು ಈ ಪ್ರದೇಶದಲ್ಲಿ ಸುಮಾರು 40 ಸಾವಿರಕ್ಕೂ ಅಧಿಕ ಮಂದಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು) | |

| | | |
|---|---|---|
| | | Provided that such candidates need not appear for Kannada Language Test conducted by the Karnataka Examinations Authority.<br><br>ಆದ್ದರಿಂದ ಸಿಇಟಿ 2006ರ ನಿಯಮ 5 (xiv) ರಂತೆ ಪ್ರಾಧಿಕಾರವು 1 ರಿಂದ 10ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ಹೊರರಾಜ್ಯಗಳಲ್ಲಿ ವ್ಯಾಸಂಗ ಮಾಡಿರುವ ಯಾವುದೇ ಅಭ್ಯರ್ಥಿಯನ್ನು ತಿರಸ್ಕರಿಸಿರುವುದಿಲ್ಲ. |

ಸಂ:ಇಡಿ 372 ಟೆಇಸಿ 2024

**(ಡಾ.ಎಂ.ಸಿ.ಸುಧಾಕರ್)**
**ಉನ್ನತ ಶಿಕ್ಷಣ ಸಚಿವರು**